**ಪಾಠ–4** **ಅಕ್ಟೋಬರ್ 17–23**

# 'ಯೆಹೋವನ ಕಣ್ಣುಗಳು'– ಸತ್ಯವೇದದ ಜಾಗತಿಕ ದೃಷ್ಟಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಜ್ಞಾ 15:3; ಯೋಬ 12:7–10; ಎಫೆಸ 6:12; ಪ್ರಕ 20:5,6; ಯೋಹಾನ 1:1–14; ಮಾರ್ಕ 12:29–31.

**ಸ್ಮರಣವಾಕ್ಯ : "ಯೆಹೋವನ ದೃಷ್ಟಿಯು ಎಲ್ಲೆಲ್ಲಿಯೂ ಇರುವದು; ಆತನು ಕೆಟ್ಟವರನ್ನೂ ಒಳ್ಳೆಯವರನ್ನೂ ನೋಡುತ್ತಲೇ ಇರುವನು"** ಜ್ಞಾ 15:3.

ಪೂಲೆಂಡ್ ದೇಶದ ಕವಿ ಜೆಸ್ಲಾವ್ ಮೈಲಾಜ್ ಒಂದು ಪದ್ಯ ಬರೆದಿದ್ದಾನೆ. ಆ ಪದ್ಯ ಕಲ್ಪನೆಯ ಪ್ರಾಣಿಗಳಿಂದ ಆರಂಭವಾಗುತ್ತದೆ: ಮಾತಾಡುವ ಮೊಲಗಳು, ಮಾತಾಡುವ ಅಳಿಲುಗಳು, ಇತ್ಯಾದಿ. "ನಿಜವಾದ ಸಾಮಾನ್ಯ ಪ್ರಾಣಿಗಳಂತೆಯೇ ಅವು ಸಹ ಇದ್ದವು", ಅವನು "ಪ್ರಪಂಚ ಕುರಿತ ನಮ್ಮ ಕಲ್ಪನೆ ವಾಸ್ತವ ಪ್ರಪಂಚದಂತೆಯೇ ಇದೆ" ಎಂದು ಬರೆದಿದ್ದನು. ಪದ್ಯದ ಕೊನೆಯಲ್ಲಿ– "ಇವುಗಳನ್ನು ಕುರಿತು ಚಿಂತಿಸಿ, ನಡುಗಿರಿ" ಎಂದು ಬರೆದು ಮುಗಿಸಿದನು.

"ನಡುಗು" ಎಂಬ ಪದ ತುಂಬಾ ಕಠಿಣ, ಆದರೆ ಮಾನವ ಈ ಪ್ರಪಂಚ ಕುರಿತು ಆಲೋಚಿಸುವುದೆಲ್ಲ ಸಂಪೂರ್ಣವಾಗಿ ತಪ್ಪಾಗಿರಲೂ ಸಾಧ್ಯ. ಉದಾ: ಹೆಚ್ಚುಕಡಿಮೆ ಎರಡುಸಾವಿರ ವರ್ಷಗಳ ತನಕ ಪ್ರಪಂಚದ ಚಾಣಾಕ್ಷರು ಮತ್ತು ಮೇಧಾವಿಗಳು,ಈ ಭೂಮಿಯು ಚಲಿಸದೆ ವಿಶ್ವದ ಕೇಂದ್ರದಲ್ಲಿ ನಿಂತಿದೆ ಎಂದು

* ಅಕ್ಟೋಬರ್ 24ರ ಸಬ್ಬತ್ತಿನ ಶಾಲೆಯ ಸಿದ್ಧತೆಗಾಗಿ ಈ ಪಾಠ ಓದಿಕೊಳ್ಳಿ.

ತಿಳಿದಿದ್ದರು. ಇಂದು ಭೂಮಿಯ ಮೇಲಿರುವ ಚಾಣಾಕ್ಷರು ಮತ್ತು ಮೇಧಾವಿಗಳು ಏಕಕೋಶ ಜೀವಿಯಿಂದ ಮಾನವನ ಉಗಮವಾಯಿತೆಂದು ಚಿಂತನೆ ಮಾಡುತ್ತಿದ್ದಾರೆ.

ಮಾನವರಾದ ನಾವು, ಪ್ರಪಂಚದ ಉಗಮದ ವಿಷಯದಲ್ಲಿ ತಟಸ್ಥ ನಿಲುವನ್ನು ಎಂದಿಗೂ ತೆಗೆದುಕೊಳ್ಳಲಾಗದು. ನಾವು ಪ್ರಪಂಚವನ್ನು ವೀಕ್ಷಿಸುತ್ತೇವೆ. ಪ್ರಪಂಚ ನಮ್ಮ ಮೇಲೆ ಬೀರುವ ಪ್ರಭಾವದ ಆಧಾರದ ಮೇಲೆ, ನಮ್ಮದೇ ಆದ ರೀತಿಯಲ್ಲಿ ಪ್ರಪಂಚವನ್ನು ವ್ಯಾಖ್ಯಾನಿಸುತ್ತೇವೆ. ನಮ್ಮ ಸುತ್ತಮುತ್ತಲಿರುವ ಪ್ರಪಂಚವನ್ನು ನಮ್ಮದೇ ಆದ ರೀತಿಯಲ್ಲಿ ಅರ್ಥೈಸಿಕೊಳ್ಳುತ್ತೇವೆ. ಇದನ್ನೇ ಜಾಗತಿಕ ನೋಟವೆಂದು ಕರೆಯುತ್ತೇವೆ. ಯುವಜನರಿಗೂ ಮತ್ತು ವಯಸ್ಸಾದ ಹಿರಿಯ ಸಭಿಕರಿಗೂ ಇದೇ ಸತ್ಯವೇದದ ಜಾಗತಿಕ ನೋಟವೆನ್ನುವ ಮೂಲಕ ತಪ್ಪಾದ ಬೋಧನೆಗಳನ್ನು ಮಾಡುತ್ತಿರುತ್ತೇವೆ.

**ಭಾನುವಾರ** **ಅಕ್ಟೋಬರ್ 11**

## "ಯೆಹೋವನ ಕಣ್ಣುಗಳು"

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಪ್ರೊಫೆಸರ್ ಒಬ್ಬರ ಸಿದ್ಧಾಂತದ ಪ್ರಕಾರ ನಾವು, ಈ ಪ್ರಪಂಚ ಮತ್ತು ನಮ್ಮ ಸುತ್ತಮುತ್ತ ಇರುವುದರಲ್ಲಿ ಯಾವುದೂ ವಾಸ್ತವವಲ್ಲ. ಹೊರಗಿನ ಲೋಕದ ಜೀವಿಗಳು, ತಮ್ಮ ಸೂಪರ್ ಪವರ್‌ಫುಲ್ ಕಂಪ್ಯೂಟರ್‌ನಿಂದ ನಿರ್ಮಿಸಿದ ಡಿಜಿಟಲ್ ಸೃಷ್ಟಿಗಳು ನಾವು.

ಇದೊಂದು ಆಸಕ್ತಿಕರ ಸಿದ್ಧಾಂತ, ಇದು ನಿರ್ಣಾಯಕ ಪ್ರಶ್ನೆಯೊಂದನ್ನು ಹುಟ್ಟಿಹಾಕುತ್ತದೆ: ವಾಸ್ತವದ ಗುಣಲಕ್ಷಣಗಳೇನು? ಎಂಬುದೇ ಆ ಪ್ರಶ್ನೆ.

ಈ ಪ್ರಶ್ನೆಗೆ ಎರಡು ಉತ್ತರಗಳ ಸಾಧ್ಯತೆಗಳಿವೆ. ಈ ಎರಡು ಉತ್ತರಗಳಲ್ಲಿ ಒಂದಾದರೂ ತಾರ್ಕಿಕವಾಗಿರಬಹುದು. ಮೊದಲನೆಯದು– ಈ ವಿಶ್ವ, ನಮ್ಮನ್ನು ಸೇರಿಸಿ ಅದರಲ್ಲಿರುವುದೆಲ್ಲ ಕೇವಲ (ಅಂದರೆ: ನಶ್ವರ). ಯಾರೂ ಇವುಗಳನ್ನು ಸೃಷ್ಟಿಸಲಿಲ್ಲ. ಯಾರೂ ಇವುಗಳನ್ನು ರೂಪಿಸಲಿಲ್ಲ. ಎಲ್ಲವೂ ತಾನೇ ತಾನಾಗಿ ಇಲ್ಲಿವೆ. ಇದೊಂದು ಬುದ್ಧಿಯಿಲ್ಲದ ಸಂಗತಿ. ದೇವರಿಲ್ಲ, ದೇವರುಗಳೂ ಇಲ್ಲ. ದೈವಿಕವಾದದ್ದು ಒಂದೂ ಇಲ್ಲ. ವಾಸ್ತವತೆ ಎಂಬುದು ಶುದ್ಧ ಪ್ರಾಪಂಚಿಕ,

ಶುದ್ಧ ನೈಸರ್ಗಿಕ. 2500 ವರ್ಷಗಳ ಹಿಂದೆ (ಇದೇನು ಹೊಸಕಲ್ಪನೆಯಲ್ಲ) ಇಲ್ಲಿ ಬರೀ ಪರಿಮಾಣುಗಳು ಮತ್ತು ಶೂನ್ಯವಷ್ಟೇ ಇತ್ತೆಂದು ಯಾರೋ ಒಬ್ಬರು ಹೇಳಿದ್ದಾರೆ.

ಮತ್ತೊಂದು ಉತ್ತರ: ಯಾವುದೋ ದೈವಿಕ ಶಕ್ತಿ (ಅಥವಾ ಶಕ್ತಿಗಳು) ಈ ವಿಶ್ವವನ್ನು ಸೃಷ್ಟಿಸಿತು. ಈ ಉತ್ತರ ಹಿಂದಿನ ಉತ್ತರಕ್ಕಿಂತ ಹೆಚ್ಚು ತಾರ್ಕಿಕವಾಗಿಯೂ, ವಿವೇಚನಾಯುಕ್ತವಾಗಿಯೂ, ಹೆಚ್ಚು ಅರ್ಥಪೂರ್ಣವಾಗಿಯೂ ಇದೆ; ಇದಕ್ಕೆ ಯಾವ ಅರ್ಥವಿವರಣೆಯೂ ಇಲ್ಲ. ಈ ನಿಲುವು ನೈಸರ್ಗಿಕ ಪ್ರಪಂಚ, "ಪರಮಾಣು ಮತ್ತು ಶೂನ್ಯ"ದ ಪ್ರಪಂಚವನ್ನೆಲ್ಲಾ ಆವರಿಸುತ್ತದೆ. ಆದರೆ ಅದು ಅಲ್ಲಿಗೇ ಸೀಮಿತಗೊಳ್ಳದು. ಇದು ವಾಸ್ತವದೆಡೆಗೆ ಕೈತೋರಿಸುತ್ತದೆ. ಅಂತಹ ವಾಸ್ತವತೆ ಬಹಳ ವಿಶಾಲವಾದದು, ಆಳವಾದದು. ಇಂದು ಬಹಳವಾಗಿ ಕೇಳಲ್ಪಡುವ "ಆಸ್ತಿಕನಾಗಿ–ಜಾತವಾದಿ" (Athestic-Materialist) ಹೆಚ್ಚಾಗಿ ಹಲವು ಮುಖಗಳುಳ್ಳದ್ದು.

**ಇಂದಿನ ಪಾಠದಲ್ಲಿ ಉಲ್ಲೇಖವಾದ ಆಲೋಚನೆಗಳನ್ನು ಕುರಿತು ಈ ಕೆಳಗಿನ ಸತ್ಯವೇದ ವಾಕ್ಯಗಳು ಹೇಳುವುದೇನು?**

ಕೀ 53:1; ಜ್ಞಾ 15:3; ಯೋಹಾನ 3:16; ಯೆಶಾಯ 45:21; ಲೂಕ 1:26–35.

---

---

ಯಾವುದೇ ಕ್ರೈಸ್ತೀಯ ಶಿಕ್ಷಣದ ಕೇಂದ್ರಬಿಂದು: ವಾಸ್ತವತೆ. ಅಂದರೆ ದೇವರು. ಬರೀ ದೇವರು ಎಂದರೆ ಸಾಲದು. ಎಂಥಹ ದೇವರು ಆತನೆಂದು ಅರಿಯಬೇಕು. ಆತ ಒಬ್ಬ ವೈಯಕ್ತಿಕ ದೇವರು. ನಮ್ಮನ್ನು ವ್ಯಕ್ತಿಗತವಾಗಿ ಪ್ರೀತಿಸುವವನು ಮತ್ತು ನಮ್ಮೊಂದಿಗೆ ಅನ್ಯೋನ್ಯವಾಗಿ ಒಡನಾಡುವವನು. ಅದ್ಭುತಗಳ ಸಾಧಿಸುವ ದೇವರು, ಆದರೂ ನಿಸರ್ಗ ನಿಯಮಗಳನ್ನು ಬಳಸಿಕೊಳ್ಳುವವನು. ನಿಸರ್ಗಕ್ಕೆ ನಿಯಮಗಳನ್ನು ಹಾಕಿಕೊಟ್ಟವನು ಆತನು. ಈ ನಿಯಮಗಳು ಆತನನ್ನು ಆಳಲಾರವು. ಆತನಿಗೆ ಆ ನಿಯಮಗಳನ್ನು ನಿಯಂತ್ರಿಸುವ, ಬದಲಾಯಿಸುವ

ಶಕ್ತಿಯುಂಟು. (ಉದಾ: ಕನ್ಯೆಯಾದ ಮರಿಯಳ ಗರ್ಭದಲ್ಲಿ ಯೇಸು ಹುಟಿಬಂದದ್ದು). ಈ ದೃಷ್ಟಿಕೋನವನ್ನು ವಿಶೇಷವಾಗಿ ಇಂದು ಬೋಧಿಸಬೇಕಾದ್ದು ಯಥೋಚಿತವಾಗಿದೆ. ಯಾಕೆಂದರೆ ವಿಜ್ಞಾನ ಸಹ ಇದನ್ನು ಬೆಂಬಲಿಸುತ್ತಿದೆ. ಆದರೆ ಬೌದ್ಧಿಕ ಪ್ರಪಂಚ ಇದನ್ನು ತಪ್ಪಾಗಿ ಅರ್ಥಮಾಡಿಕೊಂಡು ಬೊಬ್ಬೆ ಹಾಕಿ, ಆಸ್ತಿಕವಾದ ಮತ್ತು ನೈಸರ್ಗಿಕ ಜಾಗತಿಕ ದೃಷ್ಟಿಕೋನವನ್ನು ಎತ್ತಿ ಹಿಡಿಯುತ್ತಿದೆ.

**ಸತ್ಯವೇದದ ದೃಷ್ಟಿಕೋನದೊಂದಿಗೆ ಹೋಲಿಸಿದರೆ, ನಾಸ್ತಿಕ ಲೋಕದ ದೃಷ್ಟಿಕೋನ ಅದೆಷ್ಟು ವ್ಯತ್ಯಾಸದಿಂದಿದೆ ಎಂಬುದನ್ನು ಚಿಂತನೆ ಮಾಡಿನೋಡಿ. ಸತ್ಯವೇದದ ದೃಷ್ಟಿಕೋನ ನೈಸರ್ಗಿಕ ಜಗತ್ತನ್ನು ಆವರಿಸಿದೆ, ಆದರೆ ಅದರ ಮಿತಿಯೊಳಗೆ ಬರುವುದಿಲ್ಲ. ಕೊನೆಗೆ ಸತ್ಯವೇದದ ಜಾಗತಿಕ ದೃಷ್ಟಿಕೋನ ಮತ್ತು ಆಸ್ತಿಕ ಜಾಗತಿಕ ದೃಷ್ಟಿಕೋನವು, ಅದರ ಪ್ರತಿಸ್ಪರ್ಧಿಯಾದ ನಾಸ್ತಿಕ ದೃಷ್ಟಿಕೋನಕ್ಕಿಂತ ಹೆಚ್ಚು ತಾರ್ಕಿಕವೂ ಮತ್ತು ವಿವೇಚನಾಯುತವಾದದ್ದೂ ಆಗಿರುವುದೇಕೆ?**

**ಸೋಮವಾರ** **ಅಕ್ಟೋಬರ್ 19**

## ಲೈಬ್‌ನಿಜ್‌ರವರ ಪ್ರಶ್ನೆ

ಬಹಳ ವರ್ಷಗಳ ಹಿಂದೆ, ಜರ್ಮನಿಯಲ್ಲಿ ಗಾಟ್ಫ್ರಿರ್ಡ್ ವಿಲ್‌ಹೆಲ್ಮ್ ಲೈಬ್‌ನಿಜ್ ಎಂಬ ಒಬ್ಬ ಚಿಂತಕ ಹಾಗು ಬರಹಗಾರನಿದ್ದ. ಅವನು ಬಹು ಮೂಲಭೂತ ಪ್ರಶ್ನೆಯೊಂದನ್ನು ಕೇಳಿದ್ದ: "ಏನೂ ಇಲ್ಲ ಎಂಬುದಿಲ್ಲ, ಏನೋ ಎಂಬುದಿದೆ, ಏಕೆ?

**ಲೈಬ್‌ನಿಜ್‌ನ ಪ್ರಶ್ನೆಗೆ ಈ ಕೆಳಗಿನ ವೇದವಾಕ್ಯಗಳು ಉತ್ತರಿಸುವುದು ಹೇಗೆ?** ಆ.ಕಾ. 1:1; ಯೋಹಾನ 1:1–4; ವಿ.ಕಾ 20:8–11; ಪ್ರಕ 14:6,7, ಯೋಬ 12:7–10.

ಸತ್ಯವೇದದಲ್ಲಿ ದೇವರ ಇರುವಿಕೆಯ ನಿರೂಪಣೆ ಅತ್ಯಂತ ಮನೋಹರ. ಆದಿಕಾಂಡ 1:1ರಲ್ಲಿ ದೇವರ ಇರುವಿಕೆ ಕುರಿತು ಗೊನೆಗೊನೆಯಾದ ತಾರ್ಕಿಕ

ಚರ್ಚೆಗಳಿಂದೇನು ಆರಂಭವಾಗಿಲ್ಲ. (ಆದರೆ ಸತ್ಯವೇದದಲ್ಲಿ ತಾರ್ಕಿಕ ಚರ್ಚೆಗಳಿರುವುದುಂಟು). ಸತ್ಯವೇದ ಆತನ ಇರುವಿಕೆಯನ್ನು ಪ್ರತಿಪಾದಿಸುತ್ತದೆ (ನೋಡಿ ವಿ.ಕಾ 3:13,14) ಮತ್ತು ಇಲ್ಲಿಂದ ಆರಂಭವಾಗಿ ಸತ್ಯವೇದ, ದೇವರನ್ನು ಸೃಷ್ಟಿಕರ್ತನೆಂಬುದಕ್ಕೆ ಎಷ್ಟೋ ಸತ್ಯಗಳನ್ನು ತನ್ನ ಪುಟಗಳಲ್ಲಿ ಪ್ರಕಟಿಸಿರುವುದುಂಟು.

ಸೃಷ್ಟಿಯ ತತ್ವ, ಕ್ರೈಸ್ತೀಯ ಶಿಕ್ಷಣದ ಅಸ್ತಿವಾರ. ಕ್ರೈಸ್ತರಾಗಿ ನಾವು ಎಲ್ಲವನ್ನೂ ನಂಬುತ್ತೇವೆ. ಸೃಷ್ಟಿಯ ಪ್ರತಿಯೊಂದು ಕಾರ್ಯವು, ಆರು ದಿನಗಳ ಸೃಷ್ಟಿಯ ತತ್ವವನ್ನು ಆತುಕೊಂಡಿದೆ. ಸತ್ಯವೇದವು ಪ್ರಾಯಶ್ಚಿತ್ತ ಅಥವಾ ದಶಾಜ್ಞೆ ಅಥವಾ ಶಿಲುಬೆ ಅಥವಾ ಪುನರುತ್ಥಾನ ಅಥವಾ ಎರಡನೇ ಬರೋಣದ ಮೇಲೆ ಕುರಿತ ಯಾವುದೇ ಒಂದು ಹೇಳಿಕೆಯಿಂದ ಆರಂಭವಾಗುವುದಿಲ್ಲ.

ಇಲ್ಲ ನಿಜ, ಆದರೆ ಸತ್ಯವೇದ, ದೇವರು ಸೃಷ್ಟಿಕರ್ತನೆಂಬ ಹೇಳಿಕೆಯೊಂದಿಗೇ ಆರಂಭವಾಗುತ್ತದೆ. ಯಾಕೆಂದರೆ ದೇವರು ನಮ್ಮ ಸೃಷ್ಟಿಕರ್ತನೆಂಬ ವಾಸ್ತವತೆಯನ್ನು ಬಿಟ್ಟು ಬೇರೆ ಯಾವುದೇ ರೀತಿಯ ಬೋಧನೆ ಅರ್ಥಪೂರ್ಣವಲ್ಲ.

ಆದ್ದರಿಂದಲೇ ಒಂದು ಸತ್ಯವೇದ ಆಧಾರಿತ ಜಾಗತಿಕ ದೃಷ್ಟಿಕೋನ ಮತ್ತು ಸೃಷ್ಟಿಯ ತತ್ವವನ್ನು ಒತ್ತಿಹೇಳಬೇಕಾಗಿದೆ. ಈ ರೀತಿಯ ಒತ್ತಿಹೇಳುವಿಕೆ ಬಹುಮುಖ್ಯ. ಯಾಕೆಂದರೆ ಈ ಸತ್ಯದ ಬೋಧನೆಯ ಶತ್ರುವು ವಿಜ್ಞಾನ ಎಂಬ ಹೆಸರಿನಿಂದ ದಾಳಿ ಮಾಡುತ್ತಿದೆ. ವಿಕಸನವಾದ ಶತಕೋಟಿ ವರ್ಷಗಳಿಂದ ಜೀವರಾಶಿಯು ನಿಧಾನವಾಗಿ ವಿಕಸಿಸುತ್ತಾ ಇದ್ದಕ್ಕಿದ್ದಂತೆ ಆರಂಭವಾಯಿತೆಂದು ವಾದಮಾಡುತ್ತಾ, ಕೋಟಿಗಟ್ಟಲೆ ಜನರಲ್ಲಿ ಸತ್ಯವೇದದ ಮೇಲಿರುವ ನಂಬಿಕೆಯುನ್ನು ಹಾಳುಗೆಡಹುತ್ತಿದೆ. ಸತ್ಯವೇದದ ಬೋಧನೆ ಮತ್ತು ಕ್ರೈಸ್ತೀಯ ನಂಬಿಕೆಗೆ ವಿರೋಧಾಬಾಸದ ಬೋಧನೆಯೊಂದಿಗೆ ಎಂಬುದನ್ನು ಊಹಿಸಿಕೂಡ ನೋಡಲಾಗುತ್ತಿಲ್ಲ. ಆದ್ದರಿಂದಲೇ ವಿಕಸನ ವಾದದ ಆಲೋಚನೆಗಳನ್ನು, ಸತ್ಯವೇದದ ಸೃಷ್ಟಿಯ ತತ್ವದೊಂದಿಗೆ ಸಾಮರಸ್ಯ ಮಾಡಲು ಹೋಗುವದು, ನಾಸ್ತಿಕವಾದಕ್ಕಿಂತಲೂ ಬಹಳ ಕೆಟ್ಟದ್ದೆಂದೇ ಪರಿಗಣಿಸಲಾಗಿದೆ. ಹಾಗೆ ಮಾಡಲೇ ಬಾರದು. ಹಾಗೆ ಮಾಡಿದರೆ ಸತ್ಯವೇದ ಮತ್ತು ಕ್ರೈಸ್ತೀಯ ನಂಬಿಕೆಯನ್ನು ಅಪಹಾಸ್ಯ ಮಾಡಿದಂತಾಗುತ್ತದೆ.

ವಾರದ ಏಳುದಿನಗಳಲ್ಲಿ ಒಂದು ದಿನದ ಕಾಲವನ್ನು ಪ್ರತಿವಾರ, ಆರು–ದಿನಗಳ ಸೃಷ್ಟಿಯನ್ನು ನೆನಸಿಕೊಳ್ಳುವುದರಲ್ಲಿ ಕಳೆಯಬೇಕೆಂದು ದೇವರು ಹೇಳಿದ್ದಾನೆ. ಕ್ರೈಸ್ತೀಯ ಜಾಗತಿಕ ದೃಷ್ಟಿಗೆ ಈ ತತ್ವ ಹೇಗೆ ಮೂಲಭೂತವಾದದ್ದು ಮತ್ತು ಮುಖ್ಯವಾದದ್ದು ಎಂಬ ವಿಷಯದ ಬಗ್ಗೆ ಮೇಲಿನ ಹೇಳಿಕೆ ಹೇಳುವುದೇನು?

**ಮಂಗಳವಾರ** **ಅಕ್ಟೋಬರ್ 20**

## ಸತ್ಯವೇದದಾಧಾರಿತ ಜಾಗತಿಕ ದೃಷ್ಟಿ

ಮುನ್ನುಡಿಯಲ್ಲಿ ಹೇಳಿದ ಹಾಗೆ, ನಮ್ಮಲ್ಲಿ ಯಾರೇ ಆಗಲಿ ಪ್ರಪಂಚವನ್ನು ತಟಸ್ಥ ನಿಲುವಿನಿಂದ ನೋಡಲಾಗದು. ಉದಾ: ಒಬ್ಬ ನಾಸ್ತಿಕ ಆಕಾಶದಲ್ಲಿ ಕಾಮನಬಿಲ್ಲನ್ನು ಕಾಣುತ್ತಾನೆ. ಅವನಿಗೆ ಅದೊಂದು ನೈಸರ್ಗಿಕ ಪ್ರಕ್ರಿಯೆ ಎನ್ನುವುದಕ್ಕಿಂತ ಹೆಚ್ಚಿಗೆ ಏನೂ ಅನ್ನಿಸುವುದಿಲ್ಲ. ಜನರು ಅದಕ್ಕೆ ಏನು ಅರ್ಥಕೊಡಬೇಕೆಂದು ತೀರ್ಮಾನಿಸಿದ್ದಾರೋ ಅದಕ್ಕಿಂತ ಹೆಚ್ಚಿನ ಅರ್ಥ ಅವನಿಗೆ ಗೊತ್ತಿಲ್ಲ. ಇದಕ್ಕೆ ಭಿನ್ನವಾಗಿ, ಮತ್ತೊಬ್ಬ, ಅದೇ ಕಾಮನಬಿಲ್ಲನ್ನು ಸತ್ಯವೇದದ ದೃಷ್ಟಿಯಿಂದ ಕಾಣುತ್ತಾನೆ. ಅವನು ಅದನ್ನು ಒಂದು ನೈಸರ್ಗಿಕ ಪ್ರಕ್ರಿಯೆ ಎಂದಷ್ಟೇ ತಿಳಿಯುವುದಿಲ್ಲ, ವೈಜ್ಞಾನಿಕ ವಕ್ರೀಭವನ ಪ್ರಕ್ರಿಯೆ ಎಂದೂ ಹೇಳುವುದಿಲ್ಲ. ಆದರೆ ಇದು ಈ ಭೂಮಿಯನ್ನು ಮತ್ತೆ ಜಲಪ್ರಳಯದಿಂದ ನಾಶಮಾಡುವುದಿಲ್ಲ ಎಂಬುದಕ್ಕೆ ದೇವರು ಕೊಟ್ಟ ವಾಗ್ದಾನವಿದು (ಆದಿಕಾಂಡ 9:13–16) ಎಂದು ನಂಬುತ್ತಾನೆ. ತಪ್ಪುಮಾಡಿದ ತನ್ನ ಸೃಷ್ಟಿಯ ಮೇಲೆ ಅನುಕಂಪ ತೋರಿ, ಕರುಣೆ ಬೀರಿ, ಮುಂದೆ ಅಂತಹ ಪ್ರಳಯ ಉಂಟುಮಾಡದಂತೆ ತಡೆಯುವ ಸಲುವಾಗಿ ಆ ಸುಂದರವಾದ ಕಾಮನಬಿಲ್ಲನ್ನು ಆಕಾಶದಲ್ಲಿಟ್ಟನು..... ಮುಂದಿನ ಪೀಳಿಗೆ, ಆಕಾಶದೆತ್ತರಕ್ಕೆ ಮೂಡಿನಿಲ್ಲುವ ಆ ಕಾಮನಬಿಲ್ಲಿಗೆ ಅರ್ಥವೇನೆಂದು ಕೇಳಬೇಕು ಎಂಬುದೇ ದೇವರ ಉದ್ದೇಶವಾಗಿತ್ತು. ಆಗ ಅವರ ತಂದೆ–ತಾಯಂದಿರು ನೋಹನ ಕಾಲದ ಜಲಪ್ರಳಯದ ಕಥೆಯನ್ನು ಅವರಿಗೆ ತಿಳಿಸಿ ಹೇಳುವರು. ಭೂಮಿ ಇನ್ನೆಂದು ನೀರಿನಲ್ಲಿ ಮುಳುಗದೆಂಬುದಕ್ಕೆ ದೇವರು ಮಾಡಿದ ವಾಗ್ದಾನದ ಚಿಹ್ನೆಯೆಡೆಗೆ ತಮ್ಮ ಮಕ್ಕಳ ಗಮನ ಸೆಳೆಯುವರು" – ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಅಂಡ್ ಪ್ರಾಫೆಟ್ಸ್, ಪುಟ 106.

ಸೆವೆಂತ್ ಡೇ ಅಡ್ವೆಂಟಿಸ್ಟ್ ಜನರಿಗೆ ಅವರ ನಂಬಿಕೆಗೆ ಸತ್ಯವೇದವೇ ಮೂಲಭೂತ ಸಾಕ್ಷಿ. ಆ ವೇದ ಜಾಗತಿಕ ದೃಷ್ಟಿಕೋನವನ್ನು ಬೋಧಿಸುತ್ತಿದೆ. ಆ ಭೂತಕನ್ನಡಿಯ ಮೂಲಕ ಪ್ರಪಂಚವನ್ನು ನೋಡಿ ಅರ್ಥಮಾಡಿಕೊಳ್ಳ ಬೇಕಾಗಿದೆ. ಈ ಭೂಮಿ ಬಹಳ ಅಂಜಿಸುವ ಮತ್ತು ಗೊಂದಲದಲ್ಲಿ ಬಿದ್ದ ಸ್ಥಳವಾಗಿದೆ. ನಮ್ಮೆಲ್ಲರ ವಾಸ್ತವದ ಒಂದು ಭಾಗವಾಗಿ ನಾವಿನ್ನೂ ಅದನ್ನು ಅರ್ಥಮಾಡಿಕೊಳ್ಳದೆ, ಗೊಂದಲಕ್ಕೊಳಗಾಗಿ ಮತ್ತು ಸ್ಪಷ್ಟವಾಗಿ ಚಿಂತನೆ ಮಾಡಲಿಕ್ಕಾಗದ ಈ ಪರಿಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಸತ್ಯವೇದವೇ ನಿಮಗೆ ಬೇಕಾದ ವಸ್ತುವನ್ನು ಸಿದ್ಧಪಡಿಸಿಕೊಡುತ್ತದೆ.

**ಬುಧವಾರ** **ಅಕ್ಟೋಬರ್ 21**

## ವಿಮೋಚಕನನ್ನೇ ಆರಾಧಿಸಿರಿ

ನಮ್ಮ ನಂಬಿಕೆಗೆ ಸೃಷ್ಟಿಯ ತತ್ವನಿರ್ಣಯಕವಾದುದು. ಅದರಲ್ಲೂ ವಿಶೇಷವಾಗಿ ಹೊಸ ಒಡಂಬಡಿಕೆಯಲ್ಲಿ, ಅದು ಒಂಟಿಯಾಗಿ ಬಾರದು. ವಿಮೋಚನೆಯ ತತ್ವದೊಂದಿಗೆ ಜಂಟಿಹಾಕಿಕೊಂಡು, ಒಂದರಿಂದ ಇನ್ನೊಂದು ಬಿಡಿಸಲಾಗದಷ್ಟು ಜೋಡಿಯಾಗಿ ಬಂದಿವೆ. ಅದಕ್ಕೆ ಕಾರಣವನ್ನು ನೇರವಾಗಿ ಹೇಳಬೇಕೆಂದರೆ: ಪಾಪ ಮತ್ತು ಮರಣ ತುಂಬಿರುವ ಈ ಅಧಃಪತನಗೊಂಡ ಜಗತ್ತಿಗೆ ಸೃಷ್ಟಿಯ ತತ್ವವೊಂದೇ ಸಾಲದು. ನಾವು ಜೀವಿಸುತ್ತೇವೆ. ನಾವು ಹೋರಾಡುತ್ತೇವೆ, ನಾವು ಸಂಕಟಪಡುತ್ತೇವೆ (ನಾವೆಲ್ಲ ಇವುಗಳನ್ನು ಅನುಭವಿಸಿದ್ದೇವೆ) ನಂತರ ಮುಂದೇನು? ನಾವು ಸಾಯುತ್ತೇವೆ. ಪ್ರಾಣಿಯೊಂದು ರಸ್ತೆಬದಿಯಲ್ಲಿ ಹೋಗಿ ಹೆಣವಾಗಿ ಬಿದ್ದಿರುತ್ತದೆಯೋ ಹಾಗೊಂದು ದಿನ ಹೆಣವಾಗಿಬಿಡುತ್ತೇವೆ.

ಇದೂ ಸಹ ಒಂದು ಘನಕಾರ್ಯವಾಗುವುದು ಹೇಗೆ? ಆದ್ದರಿಂದ ನಮ್ಮ ಜಾಗತಿಕ ದೃಷ್ಟಿಯಲ್ಲಿ ಮತ್ತೊಂದು ನಿರ್ಣಾಯಕವಾದ ತತ್ವ–ವಿಮೋಚನೆಯ ತತ್ವ. ಅಂದರೆ ನಮ್ಮನ್ನು ರಕ್ಷಿಸುವ ಸಲುವಾಗಿ ನಮಗಾಗಿ ಮರಣಿಸಿ ನಂತರ ಪುನರುತ್ಥಾನಗೊಂಡ ಯೇಸುಕ್ರಿಸ್ತನಲ್ಲಿ ನಮಗೆ ನಂಬಿಕೆಯಿದೆ. ನಮ್ಮ ನಂಬಿಕೆಯ ಕೇಂದ್ರಬಿಂದು ಸಹ ಇದಾಗಿದೆ.

**ಯೋಹಾನ 1:1–14ನ್ನು ಓದಿರಿ. ಈ ವಾಕ್ಯಗಳು ಯೇಸು ಯಾರು ಮತ್ತು**

**ನಮ್ಮನ್ನು ರಕ್ಷಿಸುವುದಕ್ಕಾಗಿ ಆತನು ಮಾಡಿದ್ದೇನು ಎಂಬ ವಿಷಯದಲ್ಲಿ ಈ ವಾಕ್ಯಗಳು ನಮಗೆ ತಿಳಿಸಿಕೊಡುವುದೇನು?**

---

---

ಮೊದಲನೇ ದೇವದೂತನ ಸಂದೇಶದ ಕಡೆಗೂ ನಮ್ಮ ಗಮನ ಕೊಡೋಣ: **"ಮತ್ತೊಬ್ಬ ದೇವದೂತನು ಆಕಾಶದಲ್ಲಿ ಹಾರಿಹೋಗುವುದನ್ನು ಕಂಡೆನು, ಭೂನಿವಾಸಿಗಳಾಗಿರುವ ಸಕಲ ಜನಾಂಗ ಕುಲ ಪ್ರಜೆಗಳವರಿಗೂ ಸಕಲ ಭಾಷೆಗಳನ್ನಾಡುವವರಿಗೂ ಸಾರಿಹೇಳುವುದಕ್ಕೆ ನಿತ್ಯವಾದ ಶುಭವರ್ತಮಾನವು ಅವನಲ್ಲಿತ್ತು. ಅವನು ನೀವೆಲ್ಲರೂ ದೇವರಿಗೆ ಭಯಪಟ್ಟು ಆತನನ್ನು ಘನಪಡಿಸಿರಿ. ಆತನು ನ್ಯಾಯತೀರ್ಪು ಮಾಡುವ ಗಳಿಗೆಯು ಬಂದಿದೆ. ಭೂಲೋಕ ಪರಲೋಕಗಳನ್ನು ಸಮುದ್ರವನ್ನೂ ನೀರಿನ ಬುಗ್ಗೆಗಳನ್ನೂ ಉಂಟುಮಾಡಿದಾತನಿಗೆ ನಮಸ್ಕಾರ ಮಾಡಿರಿ ಎಂದು ಮಹಾಶಬ್ದದಿಂದ ಹೇಳಿದನು"** (ಪ್ರಕ 14:6,7).

**ಗುರುವಾರ** **ಅಕ್ಟೋಬರ್ 22**

## ದೇವರಾಜ್ಞೆ

ಕೆಲವು ವರ್ಷಗಳ ಹಿಂದೆ, ಫ್ರಾನ್ಸ್ ದೇಶದಲ್ಲಿ ಮರಣದಂಡನೆಯನ್ನು ಕುರಿತು ವ್ಯಾಪಕ ಚರ್ಚೆ ನಡೆಯಿತು. ಅದನ್ನು ರದ್ದು ಮಾಡಬೇಕೆ? ಇದನ್ನು ರದ್ದುಪಡಿಸಬೇಕೆಂದುಕೊಂಡ ವಕೀಲರುಗಳು, ಆಗಿನ ಕಾಲಕ್ಕೆ ಪ್ರಸಿದ್ಧ ಬರಹಗಾರನು ಮತ್ತು ತತ್ವಜ್ಞಾನಿಯೂ ಆಗಿದ್ದ, ಮೈಕಲ್ ಪೌಕಲ್ಟ್ ಎಂಬುವವನನ್ನು ಸಂಧಿಸಿ ತಮ್ಮ ಪರವಾಗಿ ಒಂದು ಸಂಪಾದಕೀಯ ಬರೆಯಬೇಕೆಂದು ಮನವಿ ಮಾಡಿಕೊಂಡರು. ಅವನೇನು ಮಾಡಿದ ಗೊತ್ತೇ? ಮರಣದಂಡನೆಯನ್ನು ರದ್ದುಮಾಡುವುದೇಕೆ, ಇಡೀ ಸೆರೆಮನೆಯ ವ್ಯವಸ್ಥೆಯನ್ನೇ ರದ್ದುಮಾಡಬೇಕು ಮತ್ತು ಸೆರೆಯಾಳುಗಳನ್ನೆಲ್ಲ ಬಿಡುಗಡೆಮಾಡಬೇಕು ಎಂದು ಹೇಳಿದ್ದನು.

ಏಕೆ? ಯಾಕೆಂದರೆ ಮೈಕಲ್ ಪೌಕಲ್ಟಾನ ಪ್ರಕಾರ ನೀತಿಶಾಸ್ತ್ರದ ವ್ಯವಸ್ಥೆಯು ಕೇವಲ ಮಾನವನಿಂದ ರಚನೆಗೊಂಡದ್ದು, ಜನಸಮೂಹವನ್ನು ನಿಯಂತ್ರಣದಲ್ಲಿಡಲು ಅಧಿಕಾರದಲ್ಲಿರುವವರು ಹುಟ್ಟುಹಾಕಿದ ಮಾನವನ ಆಲೋಚನೆಗಳು. ಆದ್ದರಿಂದ ಈ ನೈತಿಕ ನಿಯಮಗಳಲ್ಲಿ ನಿಜವಾದ ನ್ಯಾಯವಿಲ್ಲ.

ಅದು ಏನೇ ಆಗಿರಲಿ, ಮೈಕಲ್‌ನ ನಿಲುವು ಅತಿರೇಕದಿಂದ ಕೂಡಿದ್ದಿರಬಹುದು, ನಾವು ಇಲ್ಲಿ ನೋಡುವುದೇನೆಂದರೆ ಒಂದು ಸಮಸ್ಯೆಗೆ ದೊರೆಯುವ ತಾರ್ಕಿಕ ಕಾರ್ಯ ಫಲವಷ್ಟೇ. ಅದರಲ್ಲಿ ಹೊಸತೇನೂ ಇಲ್ಲ. ಸಾವಿರಾರು ವರ್ಷಗಳ ಹಿಂದೆ ಮೋಶೆ ಸಹ ಪುರಾತನ ಇಸ್ರಾಯೇಲ್ಯರೊಂದಿಗೆ ಇವೆಲ್ಲವನ್ನು ಪ್ರಯೋಗ ಮಾಡಿದ್ದ: "**ನಾವು ಈಗ ಈ ಸ್ಥಳದಲ್ಲಿ ನಡೆಯುವಂತೆ ಎಲ್ಲರೂ ತಮ್ಮ ತಮ್ಮ ಮನಸ್ಸಿಗೆ ತೋರಿದಂತೆ ನಡೆಯಕೂಡದು**" (ಧ.ಕಾ 12:8, ಇದರ ಜೊತೆ ನ್ಯಾಯ 17:6 ಮತ್ತು ಜ್ಞಾ 12:15ನ್ನು ಸಹ ಓದಿಕೊಳ್ಳಿ).

ಹೀಗಿದ್ದಾಗ್ಯೂ, ನಮ್ಮ ಕಣ್ಣಿಗೆ ಸರಿ ಕಂಡಂತೆ ನ್ಯಾಯವಾದದ್ದನ್ನು ನಾವು ಮಾಡದೆ ಹೋದರೆ, ನಾವೇ ನ್ಯಾಯವಂತರಲ್ಲ, ಪರಿಶುದ್ಧರಲ್ಲ ಮತ್ತು ನೀತಿಧರ್ಮಕ್ಕನುಸಾರ ಸರಿಯಾದದ್ದು ಯಾವುದು ಎಂಬುದನ್ನು ನಿರ್ಣಯಿಸಲಿಕ್ಕಾಗದವರೂ ಆಗಿರುತ್ತೇವೆ. ಹೀಗಿದ್ದ ಮೇಲೆ ಮುಂದೇನು ಮಾಡಬೇಕು ಎಂಬುದು ನಮಗೆ ಹೇಗೆ ಗೊತ್ತಾಗಬೇಕು? ಉತ್ತರ: ನಮ್ಮೆಲ್ಲರನ್ನು ಸೃಷ್ಟಿಸಿದ ಕರ್ತನಾದ ದೇವರು, ನಮ್ಮ ಬಾಳಿಗೆ ಬೇಕಾದ ನೈತಿಕ ನಿಯಮಗಳನ್ನು ಹಾಕಿಕೊಟ್ಟಿರುವನು. ನಮ್ಮ ಕಣ್ಣುಗಳಿಗೆ ಬಹುಶಃ ಅವು ಕಾಣದಂತಿರಬಹುದು, ಆದರೆ ಕರ್ತನಾದ ದೇವರು ಯಾವಾಗಲೂ ನೀತಿಯನ್ನೇ ನಡೆಸುವನು.

ಈ ಕೆಳಗಿನ ವೇದವಾಕ್ಯಗಳು ನೈತಿಕ ಚಾರಿತ್ರ್ಯ ಕುರಿತು ಹೇಳುವುದೇನು? ಧ.ಕಾ. 6:5; ಮಾರ್ಕ 12:29–51; ಪ್ರಕ 14:12.

________________________________________

________________________________________

ನಮ್ಮ ಕ್ರೈಸ್ತೀಯ ಜಾಗತಿಕ ದೃಷ್ಟಿಗೆ ನಾವು ವಿಮೋಚನೆಯನ್ನು ಕೇಂದ್ರ ಬಿಂದು ಮಾಡಲು ಹೊರಟರೆ, ಆಗ ನಾವು ದೇವರಾಜ್ಞೆಯಾದ ದಶಾಜ್ಞೆಗಳನ್ನು ಸಹ ಕೇಂದ್ರ ಅಂಶವಾಗಿ ಪರಿಗಣಿಸಬೇಕು. ಪಾಪವನ್ನು ಬೇರ್ಯಾವುದರಿಂದ ಬಿಡುಗಡೆಗೊಳಿಸಬೇಕಿದೆ? ಆಜ್ಞೆಯ ಉಲ್ಲಂಘನೆಯೇ ಪಾಪವಲ್ಲವೇ? (ರೋಮ 3:20). ದೇವರಾಜ್ಞೆಯನ್ನು ಹೊರತುಪಡಿಸಿದರೆ, ಸುವಾರ್ತೆ ನಿಜಕ್ಕೂ ಅರ್ಥರಹಿತ. ಈ ಕಾರಣಕ್ಕಾಗಿಯೇ ದೇವರಾಜ್ಞೆ ನಮ್ಮನ್ನು ರಕ್ಷಿಸದಿದ್ದರೂ, ನಮ್ಮನ್ನು ತನ್ನ ಬಂಧನದಲ್ಲಿರಿಸಿದೆ.

ಆದ್ದರಿಂದಲೇ ಸೆವೆಂತ್–ಡೇ ಅಡ್ವೆಂಟಿಸ್ಟ್ ಶಿಕ್ಷಣದಲ್ಲಿ, ಎಲೆನ್ ಜಿ ವೈಟ್ ಅಮ್ಮನವರು ಹೇಳುವುದು "ದೇವರಾಜ್ಞೆಯ ನಿತ್ಯತೆ" ಎಂಬ ಸತ್ಯಕ್ಕೆ ಒತ್ತು ಕೊಡಬೇಕು. ಇದರಲ್ಲಿ ಸಬ್ಬತ್ ಸಹ ಅಡಕವಾಗಿದೆ. ನಮ್ಮ ಜೀವನದಲ್ಲಿ ಎಷ್ಟು ಸಾಧ್ಯವೋ ಅಷ್ಟರ ಮಟ್ಟಿಗೆ ಶಿಕ್ಷಣ, ದೇವರ ಸ್ವರೂಪವನ್ನು ನಮ್ಮಲ್ಲಿ ಪುನರ್ ಸ್ಥಾಪನೆ ಮಾಡುವುದಾದರೆ, ಕೆಳಹಂತದಿಂದಲೇ ದೇವರಾಜ್ಞೆಯನ್ನು ಎತ್ತಿ ಹಿಡಿಯಬೇಕು. ಕ್ರಿಸ್ತನ ನಿದರ್ಶನದ ಬೆಳಕಿನಲ್ಲಿ, ನೈತಿಕ ನಿಯಮವು ದೇವರ ದೃಷ್ಟಿಯಲ್ಲಿ ಯಾವುದು ಸರಿ ಎಂಬುದನ್ನು ತೋರಿಸಿಕೊಡುತ್ತದೆ.

**ಶುಕ್ರವಾರ** **ಅಕ್ಟೋಬರ್ 23**

**ಹೆಚ್ಚಿನ ಚಿಂತನೆಗಾಗಿ:** "ಶಿಕ್ಷಣದ ನಿಜವಾದ ಉದ್ದೇಶ ದೇವರ ಸ್ವರೂಪವನ್ನು ಮಾನವನ ಆತ್ಮದಲ್ಲಿ ಪುನರ್ ರೂಪಿಸುವಂತಿರಬೇಕು. (ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಅಂಡ್ ಪ್ರಾಫೆಟ್ಸ್, ಪುಟ 595). ಈ ಆಲೋಚನೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅಡ್ವೆಂಟಿಸ್ಟ್ ಶಿಕ್ಷಣಕ್ಕೆ ಬಲವಾದ ಕ್ರೈಸ್ತೀಯ ಜಾಗತಿಕ ದೃಷ್ಟಿ ಯಾಕೆ ಬೇಕು ಎಂಬುದನ್ನು ಮನಗಾಣಬಹುದು. ಎಲ್ಲ ಶಿಕ್ಷಣವು ಒಳ್ಳೇ ಶಿಕ್ಷಣ ಎಂದು ಹೇಳಲಾಗದು. ಸತ್ಯವೇದದ ತತ್ವಗಳಿಗೆ ವಿರುದ್ಧವಾದ ಆಲೋಚನೆ ಮತ್ತು ಅಭಿವೃತ್ತಿಗಳಲ್ಲಿ ಜನ ಉನ್ನತ ಶಿಕ್ಷಣ ಪಡೆಯುವ ಸಾಧ್ಯತೆಗಳುಂಟು. ಈ ಕಾರಣಕ್ಕಾಗಿಯೇ ಸೆವೆಂತ್–ಡೇ ಅಡ್ವೆಂಟಿಸ್ಟರಾದ ನಮ್ಮ ಶಿಕ್ಷಣ ವ್ಯವಸ್ಥೆ ಕ್ರೈಸ್ತೀಯ ಜಾಗತಿಕ ದೃಷ್ಟಿಯನ್ನು ಆರಾಧಿಸಬೇಕಾಗಿದೆ. ಅಂದರೆ ಶಿಕ್ಷಣದ ವಿವಿಧ ರಂಗಗಳಾದ ವಿಜ್ಞಾನ, ಇತಿಹಾಸ, ನೀತಿಶಿಕ್ಷಣ, ಸಂಸ್ಕೃತಿಯೇ ಮುಂತಾದ ರಂಗಗಳಲ್ಲಿ ಮೇಲಿನ ದೃಷ್ಟಿಯನ್ನು ಅಳವಡಿಸಬೇಕು. ಈ ಮೊದಲೇ ಹೇಳಲಾದ ಅಂಶವನ್ನು ಮತ್ತೊಮ್ಮೆ ಪುನರಾವರ್ತಿಸುವುದರಲ್ಲಿ ತಪ್ಪಿಲ್ಲ, ಅದೇನೆಂದರೆ: ಈ ದೃಷ್ಟಿಕೋನದಲ್ಲಿ ತಟಸ್ಥ ನಿಲುವು ಸಲ್ಲದು. ಎಲ್ಲ ಜೀವನವನ್ನು ಮತ್ತು ಎಲ್ಲ ವಾಸ್ತವತೆಯನ್ನು ಜಾಗತಿಕ ದೃಷ್ಟಿಯಿಂದ ವೀಕ್ಷಿಸೋಣ. ಆ ಜಾಗತಿಕ ದೃಷ್ಟಿಯನ್ನು ಖಚಿತವಾಗಿಯೂ ಮತ್ತು ವ್ಯವಸ್ಥಿತವಾಗಿಯೂ ಆಲೋಚಿಸಿ ನೋಡೋಣ. ಆದ್ದರಿಂದಲೇ ಎಲ್ಲ ಸೆವೆಂತ್–ಡೇ ಅಡ್ವೆಂಟಿಸ್ಟ್ ಶಿಕ್ಷಣದ ಅಡಿಪಾಯದಲ್ಲಿ ಸತ್ಯವೇದ ಆಧಾರಿತ ಜಾಗತಿಕ ದೃಷ್ಟಿಕೋನವಿರಬೇಕಾದ್ದು ಅತ್ಯಾವಶ್ಯ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಇಡೀ ಶೈಕ್ಷಣಿಕ ವ್ಯವಸ್ಥೆ ಇತಿಹಾಸದಲ್ಲಿ ವಿನಾಶಕಾರಿಯಾಗಿದ್ದಕ್ಕೆ ಉದಾಹರಣೆಗಳಾವುವು? ಆ ಸ್ಥಳಗಳಾವುವು ಮತ್ತು ಅಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಿದ್ದಾದರೂ ಏನು? ಈ ಉದಾಹರನೆಯಿಂದ ನಾವು ಕಲಿಯುಬಹುದಾದ ಪಾಠಗಳಾವುವು? ಇಂತಹ ವಿನಾಶಕಾರಿ ಪ್ರಭಾವಗಳಿಂದ ನಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು ಕಾಪಾಡುವುದು ಹೇಗೆ?

2. ಈ ವಾರದ ಪಾಠ ಕ್ರೈಸ್ತೀಯ ಜಾಗತಿಕ ದೃಷ್ಟಿಯ ಕೆಲವು ಅಂಶಗಳೆಡೆ ನಮ್ಮ ಗಮನವನ್ನು ಸೆಳೆದಿದೆ. ಅವು: ದೇವರ ಅಸ್ತಿತ್ವ, ಸೃಷ್ಟಿ, ಸತ್ಯವೇದ; ವಿಮೋಚನೆಯ ಯೋಜನೆ, ಮತ್ತು ದೇವರಾಜ್ಞೆ. ಕ್ರೈಸ್ತೀಯ ಜಾಗತಿಕ ದೃಷ್ಟಿಯ ಸಂಪೂರ್ಣ ಸೂತ್ರದಲ್ಲಿ ಇನ್ಯಾವ ಬಹುಮುಖ್ಯವಾದ ಅಂಶಗಳ ಸೇರ್ಪಡೆಯಾಗಬೇಕು?

3. 10ನೇ ಶತಮಾನದ ಚಿಂತಕನೊಬ್ಬ ಹೀಗೆ ಬರೆದಿದ್ದಾನೆ: "ಓ ಮನಸ್ಸಾಕ್ಷಿ: ಮನಸ್ಸಾಕ್ಷಿ: ನೀನು ದೈವಿಕ ಅಂತಃಸ್ಫೂರ್ತಿ, ಅಜ್ಞಾನಕ್ಕೆ ಮಾರ್ಗದರ್ಶಿ, ಬುದ್ಧಿಶಾಲಿ ಮತ್ತು ಸರ್ವಸ್ವಚ್ಛಂದಮಯೀ– ಒಳ್ಳೇದು ಮತ್ತು ಕೆಟ್ಟದರ ಖಡಕ್ ನ್ಯಾಯಾಧೀಶ, ಜನರನ್ನು ದೇವರನ್ನು ಹೋಲುವಂತೆ ರೂಪಿಸುವ ಶಿಲ್ಪಿ". ಈ ಚಿಂತಕನ ಚಿಂತನೆಯಲ್ಲಿರುವ ಸರಿ ಯಾವುದು ಅಥವಾ ತಪ್ಪು ಯಾವುದು.

4. ಮತ್ತೊಮ್ಮೆ ಎಲೆನ್ ಜಿ ವೈಟಮ್ಮನವರ ಹೇಳಿಕೆಯನ್ನು ಓದಿಕೊಳ್ಳಿ: ಶಿಕ್ಷಣದ ನಿಜವಾದ ಉದ್ದೇಶ ದೇವರ ಸ್ವರೂಪವನ್ನು ಮಾನವನ ಆತ್ಮದಲ್ಲಿ ಪುನರ್ ರೂಪಿಸುವಂತಿರಬೇಕು. ಈ ಹೇಳಿಕೆಯ ಅರ್ಥವೇನು? ಪ್ರಾಪಂಚಿಕ ಶಿಕ್ಷಣಕ್ಕಿಂತ ಅಡ್ವೆಂಟಿಸ್ಟ್ ಶಿಕ್ಷಣ ಭಿನ್ನವಾಗಿರಬೇಕೆಂಬುದನ್ನು ಈ ಹೇಳಿಕೆ ತೋರಿಸುವುದು ಹೇಗೆ?